*ಚನ್ನಿಗಪ್ಪ*
*ದೀಪಕ್ ತಿಮ್ಮಯ*
*ನೇರಾ ನೇರ*

*ನೀವು ತನಿಖೆಗೆ ಹೋದಾಗ, ಅಕ್ರಮ ಗಣಿಗಾರಿಕೆಗೆ ಯಾರ ಬೆಂಬಲ ಇದೆ ಅಂತ ನಿಮಗನ್ನಿಸ್ತು?*

ಅಲ್ಲಿ ಜನ ಹೇಳಿದ್ರು ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡ್ತಾ ಇಲ್ಲ, ರಾಜಕಾರಣಿಗಳು ಸರಿಯಾಗಿ ಕೆಲಸ ಮಾಡ್ತಾ ಇಲ್ಲ. ಯಾರೇ ಒಂದು ಅರ್ಜಿ ಕೊಟ್ರು ಅದನ್ನ ಗಣನೆಗೆ ತೊಗೊಳ್ಳೋದಿಲ್ಲ ಅಂತ ಒತ್ತಿ ಹೇಳಿದ್ರು.

*ನಿಮಗೆ ಬಂದ ದೂರಿನಿಲ್ಲಿ ಯಾರಾದ್ರೂ ನಿರ್ದಿಷ್ಟ ರಾಜಕಾರಣಿಯ ಹೆಸರು ಹೇಳಿದ್ರಾ?*

ಹೆಸರು ಹೋಳಿಲ್ಲ. ಯಾರ ಹೆಸರೂ ಹೇಳಲ್ಲ. ಅದು ಹಿಂದುಳಿದ ಪ್ರದೇಶ ಆಗಿರೋದ್ರಿಂದ ಅಲ್ಲಿ ಜನ ಸ್ವಲ್ಪ ಹೆದರ್ತಾರೆ, ರಾಜಕಾರಣಿಗಳ ಹೆಸರು ಹೇಳೋದಿಕ್ಕೆ. ಅದು ಸತ್ಯ ವಿಚಾರ.

*ಈ ಗಣಿಗಾರಿಕೆಯಲ್ಲಿ ರಾಜಕಾರಣಿಗಳ ಪಾತ್ರ ಇರೋದ್ರಿಂದ ಅದು ಸೂಕ್ಷ್ಮ ವಿಚಾರ ಅನ್ನಿಸ್ತಾ?*

ಸೂಕ್ಷ್ಮ ವಿಚಾರ ಅನ್ನೋದಕ್ಕಿಂತ ಹೆಚ್ಚಾಗಿ ಅಲ್ಲಿ ಅನ್ಯಾಯ ಆಗ್ತಾ ಇದೆ, ಸರ್ಕಾರಕ್ಕೆ ಆಗ್ತಾ ಇರುವ ನಷ್ಟವನ್ನ ಸರಿ ಪಡಿಸಬೇಕು ಎನ್ನುವ ವಿಚಾರ ನನ್ನ ಮನಸ್ಸಿಗೆ ಬಂತು.

*ರಾಜಕಾರಣಿಗಳ ಪಾತ್ರ ಇರೋದ್ರಿಂದ ಆ ವಿಷಯಕ್ಕೆ ಕೈ ಹಾಕಿದ್ರೆ, ನಿಮ್ಮ ಬುಡಕ್ಕೇ ಬಂದ್ಬಿಡುತ್ತೇ ಅಂತ ನಿಮಗನ್ನಿಸಲಿಲ್ಲ್ವ?*

ಅದೇನೂ ಅನ್ನಿಸ್ಲಿಲ್ಲ. ಆದರೆ ಪ್ರಾಮಾಣಿಕವಾಗಿ ಕೆಲಸ ಮಾಡ್ಬೇಕಾದ್ರೆ ಎಡರುತೊಡರುಗಳಾಗಬಹುದು ಅಂತ ಅನ್ನಿಸಿತ್ತು. ಮಾತ್ರವಲ್ಲದೆ ದೇವೇಗೌಡರ ಕನಸನ್ನು ನನಸಾಗಿಸುವ ಮತ್ತು ಅವರ ಆದೇಶವನ್ನು ಪಾಲಿಸುವ ಮನಸ್ಸಿತ್ತು.

*ಅರ್ಜಿ ಬಂದ ತಕ್ಷಣ ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುವ ಆತುರವೇನಿತ್ತು?*

ಹಾಗೆ ಮಾಡೋದು ನನ್ನ ಜಾಯಮಾನ. ಅದೊಂದು ಪರಿಪಾಠವನ್ನು ನಾನು ಬೆಳೆಸಿಕೊಂಡಿದ್ದೇನೆ. ನನ್ನ ಹಿಂದಿನ ಇಲಾಖೆಗಳಲ್ಲೂ ನಾನು ಹಾಗೇ ಮಾಡಿದ್ದೇವೆ. ಯಾವುದೇ ಅರ್ಜಿ ಬಂದರೂ ತಕ್ಷಣ ಪರಿಶೀಲನೆ ಮಾಡಲಿಕ್ಕೆ ಆದೇಶ ಮಾಡ್ತೀನಿ.

*ಪರಿಶೀಲನೆ ಮಾತ್ರ ಮಾಡ್ಲಿಲ್ಲಲ್ವ, ಜೋರಾಗಿ ಸುದ್ದಿ ಮಾಡಿದ್ರಿ?*

ಸರ್ಕಾರದ ಕೀರ್ತಿಯನ್ನು ಜಾಸ್ತಿ ಮಾಡುವುದು ಮಂತ್ರಿಯ ಕರ್ತವ್ಯ. ಜನರ ಋಣ ತೀರಿಸಿಬೇಕು.

*ಇಲ್ಲ, ದೇವೇಗೌಡರ ಋಣ ತೀರಿಸಬೇಕಾಗಿತ್ತಾ?*

ಜನರ ಋಣ ತೀರಿಸೋದು. ದೇವೇಗೌಡರ ಕನಸ್ಸನ್ನು ನನಸು ಮಾಡೋದು.

*ದೇವೇಗೌಡರೇ ನಿಮ್ಮನ್ನ ಮಂತ್ರಿಯಾಗುವ ಮಟ್ಟಕ್ಕೆ ಬೆಳೆಸಿದ್ದು ಅಂತ ಹೇಳಿದ್ದೀರಲ್ಲ?*

ಹೌದು. ಅವರು ರಾಜಕೀಯದಲ್ಲಿ ನನಗೆ ಕಣ್ಣಿಗೆ ಕಾಣುವ ದೇವರು.

*ಅವರು ಏನು ಹೇಳಿದ್ರೂ ಮಾಡ್ತೀರಾ?*

ಅವರು ಅಭಿವೃದ್ಧಿಯ ಬಗ್ಗೆ ಮಾತ್ರ ಹೇಳ್ತಾರೆ.

*ರಾಜಕೀಯ ಅಭಿವೃದ್ಧಿಯ ಬಗ್ಗೆ?*

ಅದು ಹೇಳೋದೇ ಇಲ್ಲ.

*ಆದ್ರೆ, ನೀವು ಖಾಸಗಿ ಸಂದರ್ಭಗಳಲ್ಲಿ ದೇವೇಗೌಡರನ್ನು ತೆಗಳಿದ್ದೀರಂತೆ?*

ಇಲ್ಲ. ಸಾಧ್ಯಾನೇ ಇಲ್ಲ. ಈ ಉಸಿರಿರುವವರೆಗೆ ತೆಗೆಳೋದಿಲ್ಲ. ಜನರಲ್ ಆಗಿ ಏನಾದ್ರು ಮಾತಾಡ್ತೀವಿ ಬಿಟ್ರೆ, ತೆಗಳೋ ಪ್ರಶ್ನೇನೇ ಇಲ್ಲ.

*ನೀವು ತೆಗಳಿದ್ದನ್ನೆಲ್ಲ ಟೇಪ್ ಮಾಡಿ ಅವರಿಗೆ ಕೊಟ್ಟಿದ್ದಾರಂತೆ?*

ತೆಗಳಿದ್ರೂ, ಅದು ಯಾರೇ ಮಾಡಿದ್ರೂ, ಅದೆಲ್ಲ ಡ್ಯೂಪ್ಲಿಕೇಟ್. ಅದು ಬೇಕು ಅಂತ, ನನ್ನ ಮತ್ತು ಅವರ ಮಧ್ಯೆ ಕೆಡಕು ತರೋದಿಕ್ಕೇ ಮಾಡಿರಬಹುದು ಬಿಟ್ರೆ, ಅವರು ನನ್ನ ಮನಸ್ಸಿನಲ್ಲಿ ದೇವರು.

*ವಿಪರೀತ ಸಂತೋಷವಾದಾಗ ಅಥವ ಯಾವುದಾದ್ರೂ ಬೇಸರವಾದಂತಹ ಸಂಧರ್ಭದಲ್ಲಿ...?*

ಯಾವುದೇ ಸಂಧರ್ಭದಲ್ಲಿ ನಾನಂತೂ ತೆಗಳಿಲ್ಲ. ಬೇರೆಯವರು ತೆಗಳೋಕ್ಕೆ ಹೋದ್ರೂ ನಾನು ಕಂಟ್ರೋಲ್ ಮಾಡ್ತೀನಿ. ಅಂತಹ ತೆಗಳುವವರನ್ನ ನಾನು ಕಂಡೆಮ್ ಸಹ ಮಾಡಿದ್ದೀನಿ.

*ಆದ್ರೆ ಇತ್ತೀಚಿನ ದಿನಗಳಲ್ಲಿ ಯಾವಾಗಲಾದರೂ ತುಂಬಾ ಬೇಸರವಾಗಿರಬಹುದಲ್ವಾ?*

ದೇವೇಗೌಡರ ಬಗ್ಗೆ ಆಗಿಲ್ಲ. ನನಗೆ ಮೊನ್ನೆ ನೋಡಿ, ಬೇಜಾರಾಗಿದೆ. ರಾಜಕೀಯದಲ್ಲಿ ನಾನು ಏನೂ ಮಾಡ್ದೇ ಇದ್ದು, ಒಬ್ಬ ವ್ಯಕ್ತಿಯ ಬಗ್ಗೆ ಏನೂ ಹೇಳದೇ, ನನಗೆ ಗೊತ್ತಿಲ್ಲದ ಆ ವ್ಯಕ್ತಿ, ನನಗೆ ನೂರೈವತ್ತು ಕೋಟಿ ರುಪಾಯಿ ಕೊಟ್ಟಿದ್ದೀನೀಂತ ಹೇಳ್ದಾಗ ಬೇಸರ ಆಯ್ತು.

*ಆತ ಸಾಧಾರಣ ವ್ಯಕ್ತಿ ಅಲ, ಓರ್ವ ರಾಜಕಾರಣಿ. ಏನಾದ್ರು ಒಂದು ಅರ್ಥ ಇರಬಹುದಾ?*

ಇದು ದೇವೇಗೌಡರ ಕುಮಾರಸ್ವಾಮಿಯವರ ಅವನತಿ ಮಾಡಬೇಕೂಂತ, ಈ ಪಕ್ಷದ ಅನ್ನ ಉಂಡು ಹೋಗಿರುವ ವ್ಯಕ್ತಿಗಳು ಮಾಡಿರುವ ಕುತಂತ್ರದ ಕೂಸು.

*ನೂರೈವತ್ತು ಕೋಟಿ ಲಂಚದ ಆರೋಪ? ಬೆಂಕಿಯಿಲ್ಲದೆ ಹೊಗೆಯಾಡುತ್ತದಾ? ಬೆಂಕಿಯಿಲ್ಲದಿದ್ದರೂ ಕಿಡಿಯಾದರೂ ಇರಬಹುದಾ?*

ಕಾಫಿ ಕುಡಿದೂ ಪರಿಚಯವಿಲ್ಲದ ವ್ಯಕ್ತಿ ನೂರೈವತ್ತು ಕೋಟಿ ಕೊಡ್ಲಿಕ್ಕೆ ಹೇಗೆ ಸಾಧ್ಯ.

*ಆರೋಪಿಸಿದವರು ಕೊಟ್ಟಿಲ್ಲ, ಆದ್ರೆ ಬೇರೆಯವರೆಲ್ಲಾ ಕೊಟ್ಟಿದ್ದಾರೆ ಅಂತ?*

ಆ ಮಾತಿಗೆ ಗೌರವವಿಲ್ಲ ಸಮಾಜದಲ್ಲಿ, ಭಾಷೆಯಲ್ಲಿ. ಕೊಟ್ಟಿದ್ದಾರೆ, ಬಿಟ್ಟಿದ್ದಾರೆ, ಆ 'ರೆ' ಪದಗಳಿಗೆ ಅರ್ಥವಿಲ್ಲ, ತೂಕವಿಲ್ಲ. 'ಕೊಟ್ಟಿದ್ದೀನಿ' ಅಂದ್ರೆ ಅರ್ಥ' ಇದೆ.

*ಆ ಆಪಾದನೆಗೆ ಹಿನ್ನಲೆ ಇರಬೇಕಲ್ವ?*

ಕುಮಾರಸ್ವಾಮಿ ಮುಂದುವರೆದರೆ ಯಾರೂ ಮುಖ್ಯಮಂತ್ರಿ ಆಗ್ಲಿಕ್ಕೆ ಸಾಧ್ಯವಿಲ್ಲ ಅನ್ನೋದನ್ನ ಅರಿತುಕೊಂಡು ವಿರೋಧಿಗಳು ಮಾಡಿರುವ ಸುಳ್ಳು ಪ್ರಚಾರ.

*ಆದ್ರೆ ಬಿಜೆಪಿಯವರು ನಿಮ್ಮ ಜೊತೆ ಇದ್ದಿರಲ್ಲ?.*

ಇದ್ದಾರೆ. ಆದ್ರೆ ಅವರಲ್ಲೆ ಭಿನ್ನಮತ ಇದೆ ಅಂತ ಹೇಳ್ತಾರಲ್ಲ. ಆ ಗುಂಪು, ಕಾಂಗ್ರೆಸ್ ಮತ್ತು ನಮ್ಮ ಪಕ್ಷದಿಂದ ಬಿಟ್ಟು ಹೋದವರು, ಎಲ್ಲ ಶಾಮೀಲಾಗಿ ಮಾಡಿರುವ ಕೆಟ್ಟ ಆಪಾದನೆ.

*ಈಗ ಹೇಳ್ತೀರ ನಕ್ಸಲರು ಗಣಿ ಮಾಲೀಕರಿಂದ ಹಣ ಪಡೀತಾ ಇದ್ದಾರೆ ಅಂತೆ..*

ಅದರ ಬಗ್ಗೆ ನಮ್ಮ ಇಲಾಖೆಯಿಂದ ವರದಿ ಬಂತು. ನಕ್ಸಲೈಟರು ಹಣ ತೆಗೋತಾ ಇದ್ದಾರೆ, ಜನರೆಲ್ಲಾ ಭಯಭೀತರಾಗಿದ್ದಾರೆ, ಅಂತೆಲ್ಲ

*ಜನಾರ್ಧನ ರೆಡ್ಡಿಯವರು ಈಗ ಹೇಳಿರೋದು ಅಂತಹ ನಕ್ಸಲರನ್ನ ನಿಗ್ರಹಿಸಿರುವ ಎಸ್ಪಿಯನ್ನ ವರ್ಗಾವಣೆ ಮಾಡಿದ್ದೀರಾಂತ.*

ಅದನ್ನ ಜನಾರ್ಧನ ರೆಡ್ಡಿಯವರು ಸೌಹಾರ್ದಯುತವಾಗಿ ಬಗೆ ಹರಿಸಿಕೊಳ್ಳಬಹುದಿತ್ತು, ಮುಖ್ಯಮಂತ್ರಿಗಳೊಂದಿಗೆ ಮಾತಾಡಿ.

*ವರ್ಗಾವಣೆಯ ಬಗ್ಗೆ ಮುಖ್ಯಮಂತ್ರಿಗಳೂ ಹಠ ಮಾಡಿದ್ರಲ್ಲಾ?*

ಅಲ್ಲ, ಅಲ್ಲಿ ರೆಡ್ಡಿಯವರದೂ ತಪ್ಪಿಲ್ಲ ಮುಖ್ಯಮಂತ್ರಿಗಳದ್ದೂ ತಪ್ಪಿಲ್ಲ, ಶ್ರೀರಾಮುಲು ಅವರದೂ ತಪ್ಪಿಲ್ಲ, ಸ್ವಲ್ಪ ವ್ಯತ್ಯಾಸ ಬಂದಿದೆಯಷ್ಟೆ

*ಈಗ ನೀವೆಲ್ಲಾ ಹೇಳ್ತೀರಲ್ಲ ಠಾಕೂರ್‌ರವರು ಗಣಿಮಾಲೀಕರ ಅಕ್ರಮ ವ್ಯವಹಾರಗಳಿಗೆ ಬೆಂಬಲ ನೀಡಿದ್ರು, ಆದರಿಂದ ವರ್ಗಾವಣೆಗೊಂಡರು ಅಂತ.*

ಇಲ್ಲ ಹಾಗೆ ಹೇಳಿಲ್ಲ. ಅದು ನನ್ನ ಇಲಾಖೆಗೆ ಸಂಬಂಧಿಸಿದ್ದಲ್ಲ.

*ನೀವು ಅಲ್ಲಿ ಹೋಗಿ ತನಿಖೆ ಮಾಡಿದ ಉದ್ದೇಶ ಬರೀ ಅವರನ್ನ ಹೆದರಿಸೋದು ಆಗಿತ್ತು, ಆದ್ದರಿಂದ ಅವರೀಗ ನಿಮ್ಮನ್ನು ಹೆದರಿಸಿದ್ರು ಅಂತ?*

ವರದಿ ಮತ್ತು ಸಲಹೆಗಳನ್ನು ಕೊಡುವುದು ಮಾತ್ರ ನನ್ನ ಉದ್ದೇಶವಾಗಿತ್ತು.

*ನೀವು ಅಲ್ಲಿ ಅಕ್ರಮವಾಗಿದೆ ಅಂತ ಹೇಳಿದ್ರಿ. ಅದು ಈಗ ನಿಮಗೇ ತಿರುಗುಬಾಣವಾಗಿಬಿಟ್ಟಿದೆಯಲ್ಲ?*

ಯಾರಾದ್ರೂ ಒಬ್ಬ ಗಣಿ ಮಾಲೀಕ ನನ್ನ ಕೈಗೆ ಕಾಸು ಕೊಟ್ಟಿದ್ದೀನಿ, ಮುಖ್ಯಮಂತ್ರಿಗಳ ಕೈಗೆ ಕಾಸು ಕೊಟ್ಟಿದ್ದೀನಿ ಅಂತ ಹೇಳಿದ್ರೆ, ನಾನು ರಾಜಕಾರಣ ಮಾತ್ರ ಅಲ್ಲ, ನಾನು ನನ್ನ ಜೀವವನ್ನೇ ಉಳಿಸಿಕೊಳ್ಳುವುದಿಲ್ಲ, ಭೂಮಿ ಮೇಲೆ.

*ನಿಮ್ಮ ಕೈಗೆ ಕೊಟ್ಟಿಲ್ಲ. ನಿಮ್ಮ ಕಡೆಯವರ ಕೈಗೆ ಕೊಟ್ಟ್ರೆ ಅಂದ್ರೆ? ಅದಕ್ಕೆ ಕೆಟ್ಟ ಭಾಷೆಯಲ್ಲಿ ಉತ್ತರ ಕೊಡಬೇಕಾಗುತ್ತದೆ.*

ನಿಮ್ಮ ಹೆಸರಲ್ಲಿ ಯಾರಾದ್ರೂ ಹಣ ಮಾಡಿರಬಹುದಾ?

ನನ್ಗೇನು ಗೊತ್ತು, ಅದರ ಬಗ್ಗೆ. ಯಾರು ತೆಗೊಂಡ್ರೋ ಬಿಟ್ರೋ ಅದರ ಬಗ್ಗೆ ಗೊತ್ತಿಲ್ಲ. ಜನಾರ್ದನ ರೆಡ್ಡಿ ಒಳ್ಳೆಯ ತಂದೆಯ ಮಗ. ಇದೆಲ್ಲಾ ಬೇರೆಯವರ ಪ್ರಭಾವದಿಂದ ಮಾಡುತ್ತಿರುವ ಆಪಾದನೆಗಳು ಅಂತ ನನಗೆ ಗೊತ್ತಿತ್ತು. ನಾನು ಅವರೊಂದಿಗೆ ಮುಖಾಮುಖಿ ಮಾತನಾಡಿ ಇತ್ಯರ್ಥ ಮಾಡ್ತೀನಿ.

*ನೀವು ರಾಜೀನಾಮೆ ಕೊಡ್ತಾ ಇದ್ದೀರಾಂತ ಒಂದು ಸುದ್ದಿ ಬಂತಲ್ಲ.*

ಛೆ. ರಾಜೀನಾಮೆ ಕೊಡುವ ಪ್ರಮೇಯ ಇಲ್ಲ. ನನ್ನ ರಾಜೀನಾಮೆ ಯಾರೂ ಕೇಳೂ ಇಲ್ಲ. ಈಗಾಗ್ಲೇ ಅನೇಕ ಕ್ರಮಗಳನ್ನ ಕೈಗೊಂಡಿದ್ದೇವೆ. ಇದುವರೆಗೆ ಯಾರಿಗೂ ಬಳ್ಳಾರಿಗೆ ಕೈಹಾಕ್ಲಿಕ್ಕೆ ಸಾದ್ಯ ಆಗಿರಲಿಲ್ಲ. ನಾನು ದೇವೇಗೌಡರ ಶಿಷ್ಯ ಆಗಿರೋದ್ರಿಂದ ನಾನು ಅಡ್ಜಸ್ಟ್ ಆಗ್ಲಿಲ್ಲ. ಅದಕ್ಕೇ ಏನೋನೋ ಆರೋಪ ಮಾಡ್ತಾರೆ.

*ದೇವೇಗೌಡರಿಗೆ ನಿಮ್ಮ ಬಗ್ಗೆ ಬೇಸರ ಆಗಿದೆ ಅಂತಾರಲ್ಲ?*

ನಮ್ಮ ಪಕ್ಷದ ಕೆಲವರು ತಮ್ಮ ಬೇಳೇಕಾಳು ಬೇಯಿಸಿಕೊಳ್ಳೋದಿಕ್ಕೆ ದೇವೇಗೌಡರ ಹತ್ತಿರ ಹೋಗಿ ಚಾಡಿ ಹೇಳಿದ್ದಾರೆ ಅನ್ನೋದು ನನಗೆ ಗೊತ್ತು.

*ನಿಮ್ಮಿಂದ ಕೆಟ್ಟ ಹೆಸರು ಬರ್ತಾ ಇದೆ ಅಂತ ಕುಮಾರಸ್ವಾಮಿಯವರಿಗೆ ಅನ್ನಿಸಿದೆ ಅಂತ ಕೆಲವರು ಹೇಳ್ತಾ ಇದ್ದಾರಲ್ಲ?*

ಕುಮಾರಸ್ವಾಮಿಯವರಿಗೆ ನನ್ನ ಬಗ್ಗೆ ವಿಶ್ವಾಸ ಇದೆ. ನಾನು ಕುಮಾರಸ್ವಾಮಿಯವರ ನಾಯಕತ್ವವನ್ನು ಒಪ್ಪಿಕೊಂಡಿದ್ದೇನೆ. ನನಗೆ ಕುಮಾರಸ್ವಾಮಿಯವರು ಯಾವಾಗಲೂ ನಾಯಕರೇ.

*ದೇವೇಗೌಡರು ಬೇಸರಗೊಂಡು ನೀವು ರಾಜೀನಾಮೆ ಕೊಡಿ ಅಂತ ಕೇಳಿದ್ರೆ?*

ಅವರು ಕೇಳಿದ್ರೆ ನಾನು ರಾಜೀನಾಮೆ ಕೊಟ್ಟು, ಬೇರೆಲ್ಲೂ ಹೋಗದೆ ಅವರ ಜೊತೆಗೇ ಇದ್ದು ಅವರ ಸೇವಕನಾಗಿ ಕೆಲಸ ಮಾಡ್ತೇನೆ.

*ಸಿಬಿಐ ಅಥವ ಯಾವುದೇ ತನಿಖೆ ಮಾಡಿದ್ರೂ ಅದರಲ್ಲಿ ನಿಮ್ಮ ಪ್ರಾಮಾಣಿಕತೆ ಮತ್ತು ಪರಿಶುದ್ಧತೆ ಸಾಬೀತಾಗುತ್ತಾ?*

ಯಾವುದೇ ತನಿಖೆ. ಸಿಬಿಐ ಅಲ್ಲ, ಬೇಕಿದ್ದರೆ ಅಂತಾರಾಷ್ಟ್ರೀಯ ತನಿಖೆ ಮಾಡ್ಲಿ, ನನ್ನ ಪ್ರಾಮಾಣಿಕತೆ ಸಾಬೀತಾಗ್ತದೆ. ಸತ್ಯ ಗೊತ್ತಾಗುತ್ತೆ.

*ಈಗ ರೆಡ್ಡಿಯವರ ಇತ್ತೀಚಿನ ಹೇಳಿಕೆಯ ನಂತರ ದೋಷಮುಕ್ತವಾಗಿದ್ದೀರಿ ಅನ್ನಿಸುತ್ತಾ?*

**ನನಗೆ ಇದೆಲ್ಲ ಸಾಕಾಗಿದೆ. ಇಂಥಹ ರಾಜಕೀಯ ಬೇಡ. ಜನ ನನಗೆ ಇದುವರೆಗೆ ಆಶೀರ್ವಾದ ಮಾಡಿದ್ದಾರೆ. ಅದೇ ಸಂತೋಷದಲ್ಲಿ ಈ ಬಾರಿಯ ನಂತರ ರಾಜಕೀಯದಿಂದ ನಿವೃತ್ತಿಯಾಗಬೇಕೆಂದು ನಿರ್ಧರಿಸಿದ್ದೇನೆ.**